ಟಪಾಲನ್ನು ನೀವು ನೋಡಿ. ನನ್ನ ಟಪಾಲನ್ನು ನಿಮ್ಮ ಸೆಕ್ರೆಟರಿಗೆ ನಾನು ಭೇಟಿಯಾಗಿ ಕೊಟ್ಟಿದ್ದೇನೆ.

ಶ್ರೀ ಗೋವಿಂದ ಎಂ. ಕಾರ್‌ಜೋಳ : ಯಾವಾಗ ಕೊಟ್ಟಿದ್ದೀರಿ?

ಶ್ರೀ ಎಸ್.ಎಸ್. ಪಾಟೀಲ್ : 15 ದಿವಸ ಮೊದಲೇ ಯಾವಾಗ ಟೆಂಡರ್ ಕರೆದು ಹೀಗೆ ಮಾಡುತ್ತಾರೆ ಎನ್ನುವ ಸುದ್ದಿ ಬಂದ ಕೂಡಲೇ ನಿಮ್ಮ ಸೆಕ್ರೆಟರಿಯವರಿಗೆ ಲೆಟರ್ ಬರೆದಿದ್ದೇನೆ. ಅದನ್ನು ತರಿಸಿ ಯಾವ ಅಧಿಕಾರಿಗಳು ಹೆಚ್ಚು ಕೊಟ್ಟಿದ್ದಾರೆ ಅದನ್ನು ಅವರ ಕಡೆಯಿಂದ ವಸೂಲು ಮಾಡಬೇಕು. ಮೊದಲು ಇದನ್ನು ಮಾನ್ಯ ಈಶ್ವರಪ್ಪನವರೆ ನಿಲ್ಲಿಸಬೇಕು. ಸುಮಾರು 500 ರಿಂದ 1000 ಕೋಟಿ ರೂಪಾಯಿ ಉಳಿಯುತ್ತದೆ. ಮಾನ್ಯ ಉದಾಸಿಯವರಿಗೂ ಹೇಳುತ್ತೇನೆ ಮತ್ತು ನಿಮಗೂ ಹೇಳುತ್ತೇನೆ. ನಿಮಗೂ ಗೊತ್ತಿದೆ. ರಿಂಗ್ ಮಾಡಿಕೊಂಡು ಮಾತನಾಡಿಕೊಂಡು ಹತ್ತು ಪರ್ಸೆಂಟ್ ಎಬೋವ್ ಹಾಕಿಕೊಂಡು ಆ ರೊಕ್ಕವನ್ನು ಹಂಚಿಕೊಳ್ಳುತ್ತಾರೆ.

ಅಧ್ಯಕ್ಷರು : ಮಾನ್ಯ ಪಾಟೀಲರೇ ನಾನು ಎತ್ತಿದ ಪ್ರಶ್ನೆಗೆ ತಾವು ಉತ್ತರ ಹೇಳಲಿಲ್ಲ. ಅಲ್ಲಿರುವವರು ಯಾರು ರಿಂಗ್ ಲೀಡರ್‌ಗಳು?

ಶ್ರೀ ಎಸ್.ಎಸ್. ಪಾಟೀಲ್ : ನಾವಂತೂ ಮಾಡುವುದಿಲ್ಲ ಅಧ್ಯಕ್ಷರೆ. ಇವರಿಗೆ ಎಲ್ಲಿ ಸಂಶಯ ಬರುವುದಿಲ್ಲವೋ ಬಿಡಲಿ. ನಮ್ಮ ಕ್ಷೇತ್ರದಲ್ಲಿ ನಿಲ್ಲಿಸಲಿ. ನಮ್ಮ ಗದಗ್ ಜಿಲ್ಲೆಯಲ್ಲಿ ನಾವೆಲ್ಲಾ ಐದು ಮಂದಿ ಶಾಸಕರು ಜವಾಬ್ದಾರಿ ಹೊತ್ತು ಗಟ್ಟಿಯಾಗಿದ್ದೇವೆ ಮತ್ತು ಇದಕ್ಕೆ ಬದ್ಧರಿದ್ದೇವೆ. ನಮ್ಮ ಗದಗ್ ಜಿಲ್ಲೆಯಲ್ಲಿ ನಿಲ್ಲಿಸಲಿ ಇದನ್ನು. ಯಾರೂ ಎಬೋವ್ ಕೊಡಬಾರದು ಮತ್ತು ಈ ರಿಂಗ್ ನಿಲ್ಲಬೇಕು.

ಅಧ್ಯಕ್ಷರು : ಆಗೋದಿಲ್ಲ ಬಿಡಿ, ಆಗೋದಿಲ್ಲಾ ಅದು.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಟೆಂಡರ್‌ನ್ನು ಈಗಾಗಲೇ ಅಕ್ಸ್‌ಪ್ಟ್ ಮಾಡಿದ್ದಾರೆ. ವರ್ಕ್ ಆರ್ಡರ್ ಕೊಟ್ಟಿದ್ದಾರೆ. ಕೆಲಸ ಪ್ರಾರಂಭವಾಗಿದೆ. ಈ ಹಂತದಲ್ಲಿ ಕ್ಯಾನ್ಸಲ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೆ ಯಾವ ಅಧಿಕಾರಿಗಳು ತಪ್ಪು ಮಾಡಿದ್ದಾರೆ ಅಂಥವರ ವಿರುದ್ಧ ತನಿಖೆ ಮಾಡಿ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಗುತ್ತಿ ಬಸವಣ್ಣ ಏತ ನೀರಾವರಿ ಯೋಜನೆ

95(483) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನ ಬಾಗೇವಾಡಿ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗುತ್ತಿ ಬಸವಣ್ಣ ಏತ ನೀರಾವರಿ ಯೋಜನೆಯಿಂದ ಇಂಡಿ ಮತ್ತು ಸಿಂಧಗಿ ತಾಲೂಕಿನ ಯಾವ ಯಾವ ಹಳ್ಳಿಗಳ ಜಮೀನುಗಳು ನೀರಾವರಿಗೆ ಒಳಪಡುತ್ತವೆ;

ಆ) ಈ ಯೋಜನೆಯು ಈಗ ಯಾವ ಹಂತದಲ್ಲಿದೆ;

ಇ) ಯಾವ ನಿರ್ದಿಷ್ಟ ಕಾಲಮಿತಿಯೊಳಗಾಗಿ ಮುಕ್ತಾಯಗೊಳಿಸಿ ಕಾಲುವೆಗೆ ನೀರು ಬಿಡಲಾಗುವುದು;

ಈ) ಈ ಕಾಮಗಾರಿ ವಿಳಂಬವಾಗಲು ಕಾರಣಗಳೇನು?

ಶ್ರೀ ಕೆ.ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)

ಅ) ಕೃಷ್ಣಾ ಮೇಲ್ದಂಡೆ ಯೋಜನೆಯ ಸ್ಕೀಂ 'ಎ' ಅಡಿ ಗುತ್ತಿ ಬಸವಣ್ಣ ಏತ ನೀರಾವರಿ (ಇಂಡಿ ಏತ ನೀರಾವರಿ) ಯೋಜನೆಯಲ್ಲಿ ಗುಲ್ಬರ್ಗಾ ಜಿಲ್ಲೆಯ ಸುರಪುರ ತಾಲೂಕಿನ 4,000 ಹೆಕ್ಟೇರ್ ಹಾಗೂ ಬಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ 37,900 ಹೆಕ್ಟೇರ್ ಪ್ರದೇಶ ಹೀಗೆ ಒಟ್ಟು 41,900 ಹೆಕ್ಟೇರ್ ಪ್ರದೇಶ ನೀರಾವರಿಗೆ ಒಳಪಡುತ್ತದೆ. ಇಂಡಿ ತಾಲ್ಲೂಕಿನ ಕ್ಷೇತ್ರವು ನೀರಾವರಿಗೆ ಒಳಪಟ್ಟಿರುವುದಿಲ್ಲ. ಸದರಿ ಯೋಜನೆಯಿಂದ ಸಿಂದಗಿ ತಾಲೂಕಿನ 56 ಹಳ್ಳಿಗಳು ನೀರಾವರಿಗೆ ಒಳಪಡಲಿದ್ದು, ಅವುಗಳ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ ಮತ್ತು ಇ) ಜಾಕ್‌ವೆಲ್ ಕಾಮಗಾರಿ: ಮುಕ್ತಾಯ ಹಂತದಲ್ಲಿದೆ.

ಪಂಪ ಅಳವಡಿಕೆ, ಸಬ್‌ಸ್ಟೇಷನ್, ಕಾಮಗಾರಿಗಳು	ತೀವ್ರ ಪ್ರಗತಿಯಲ್ಲಿದ್ದು, ಮುಕ್ತಾಯ ಹಂತದಲ್ಲಿದೆ.
ಟ್ರಾನ್ಸ್‌ಮಿಷನ್ ಲೈನ್ ಮುಂತಾದ ಕಾಮಗಾರಿಗಳು	
ಮುಖ್ಯ ಕಾಲುವೆ: ಕಿ.ಮೀ. 97.30ರ ವರೆಗಿನ ಕಾಮಗಾರಿಗಳು	ಮುಕ್ತಾಯ ಹಂತದಲ್ಲಿದೆ.
ವಿತರಣಾ ಕಾಲುವೆ 1 ರಿಂದ 40 ಬಿ ಹಾಗೂ ಇದರಡಿ ಲ್ಯಾಟರಲ್ ಮತ್ತು ಹೊಲಗಾಲುವೆಗಳು	ಪ್ರಗತಿಯಲ್ಲಿದೆ

ಸದರಿ ಏತ ನೀರಾವರಿ ಯೋಜನೆಯ ಬಾಕಿ ಇರುವ ಎಲ್ಲಾ ಕಾಮಗಾರಿಗಳನ್ನು ಮಾರ್ಚ್–2007ರ ಒಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಮುಂಗಾರು ಹಂಗಾಮಿಗೆ ಪಂಪ್‌ಗಳನ್ನು ಅಳವಡಿಸಿ ಪ್ರಾಯೋಗಿಕವಾಗಿ ಕಾಲುವೆಗೆ ನೀರು ಹರಿ ಬಿಡಲು ಉದ್ದೇಶಿಸಲಾಗಿದೆ ಮತ್ತು ಈ ಯೋಜನೆಯಿಂದ ನೀರಾವರಿ ಸೌಲಭ್ಯವನ್ನು ಹಿಂಗಾರು ಹಂಗಾಮಿನಲ್ಲಿ ಪ್ರಾರಂಭಿಸಲಾಗುವುದು.

ಈ) ಯೋಜನೆಯ ಕಾಮಗಾರಿಗಳ ವಿಳಂಬಕ್ಕೆ ಮುಖ್ಯ ಕಾರಣಗಳು ಈ ಕೆಳಗಿನಂತಿವೆ:

1) ಜಾಕ್‌ವೆಲ್ ಕಾಮಗಾರಿಯ ಪ್ರಗತಿಯಲ್ಲಿ ಸ್ಥಳೀಯ ಪರಿಸ್ಥಿತಿಯಂತೆ ಕೆಲವು ತಾಂತ್ರಿಕ ಬದಲಾವಣೆಯ ಅವಶ್ಯಕತೆಯ ಕಾರಣ ಅಡಿಪಾಯದ ಹಾಗೂ ತಡೆಗೋಡೆಯ ವಿನ್ಯಾಸ ಅಂತಿಮಗೊಳಿಸಿ, ಅನುಮೋದನೆ ನೀಡುವಲ್ಲಿ ಹಾಗೂ ಜಾಕ್‌ವೆಲ್, ಪಂಪಿಂಗ್ ಸಿಸ್ಟಂ ಇತ್ಯಾದಿಗಳ ನಿರ್ಮಾಣ ಬೇರೆ ಬೇರೆ ಗುತ್ತಿಗೆದಾರರಿಗೆ ವಹಿಸಿಕೊಡಲಾಗಿದ್ದು, ವಿನ್ಯಾಸ ಹಾಗೂ ನಕ್ಷೆಗಳಿಗೆ ಕೆ.ಪಿ.ಟಿ.ಸಿ.ಎಲ್. ಬೆಸ್ಕಾಂಗಳಿಂದ ಅನುಮೋದನೆ ಪಡೆದುಕೊಳ್ಳುವಲ್ಲಿ ಹೆಚ್ಚಿನ ಸಮಯ ತೆಗೆದುಕೊಂಡಿದೆ.

2) ಕಾಲುವೆ ಕಾಮಗಾರಿಗಳ ನಿರ್ವಹಣೆಯಲ್ಲಿ ರೈತರ ಕೋರಿಕೆಗಳನ್ವಯ ಮತ್ತು ತಾಂತ್ರಿಕ ಕಾರಣಗಳಿಂದ ಕೆಲವು ಹೆಚ್ಚುವರಿ ಸಿ.ಟಿ.ಸಿ/ಸಿ.ಡಿ. ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿರುತ್ತದೆ. ಅಲ್ಲದೇ ಕಾಲುವೆಯ ಬ್ಯಾಂಕಿಂಗ್ ರೀಚ್‌ನಲ್ಲಿ ಕೆಲವೆಡೆ ಸ್ಥಳೀಯ ವಿಶಿಷ್ಟತೆಗನುಗುಣವಾಗಿ ವಿನ್ಯಾಸದಲ್ಲಿನ ಮಾರ್ಪಾಡುಗಳ ಅವಶ್ಯಕತೆ ಕಂಡುಬಂದಿರುತ್ತದೆ. ಈ ಕಾರಣಗಳಿಂದಾಗಿ ಕಾಮಗಾರಿಗಳ ಪರಿಮಾಣದಲ್ಲಿ ಹೆಚ್ಚುವರಿ ಉಂಟಾಗಿದ್ದು, ಇದಕ್ಕೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯುವಲ್ಲಿ ಹೆಚ್ಚಿನ ಕಾಲಾವಕಾಶ ಉಂಟಾಗಿರುತ್ತದೆ.

ಅನುಬಂಧ

ಕೃಷ್ಣಾ ಮೇಲ್ದಂಡೆ ಯೋಜನೆಯ ಸ್ಕೀಂ 'ಎ' ಅಡಿ ಗುತ್ತಿ ಬಸವಣ್ಣ ಏತ ನೀರಾವರಿ (ಇಂಡಿ ಏತ ನೀರಾವರಿ) ಯೋಜನೆಯಡಿ ನೀರಾವರಿ ಸೌಲಭ್ಯಕ್ಕೆ ಒಳಪಡುವ ಬಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ ಗ್ರಾಮಗಳ ವಿವರಗಳು:

ಕ್ರ.ಸಂ.	ಗ್ರಾಮದ ಹೆಸರು	ಕ್ರ.ಸಂ.	ಗ್ರಾಮದ ಹೆಸರು
1	ಅನಂತಾಪೂರ	29.	ಚಿಕ್ಕಯರಗಲ್
2.	ವಂದಗನೂರ	30.	ಬಬಲೇಶ್ವರ
3.	ಖಾನಪೂರ	31.	ಕಾಲಹಳ್ಳಿ
4.	ವಂದಾಲ	32.	ಹಿಕ್ಕನಗುತ್ತಿ
5.	ಬ್ರಹ್ಮದೇವನಮಡು	33.	ಚಾಂದಕವಟೆ
6.	ಗೋಲಗೇರಿ	34.	ಕನ್ನೊಳ್ಳಿ
7.	ಸಿಂದಗೇರಿ	35.	ಹಬ್ಯಾಳ
8.	ಬನಹಟ್ಟಿ	36.	ಸೂಗಿಹಾಳ
9.	ಮನ್ನಾಪೂರ	37.	ಕಡ್ಲೇವಾಡ
10.	ಗುತ್ತರಗಿ	38.	ಚಟ್ನಳ್ಳಿ
11.	ಸಿಂದಗಿ	39.	ಸಾಲದಹಳ್ಳಿ
12.	ಬೆನ್ನಾಕೊಟಗಿ	40.	ಕದರಾಪೂರ
13.	ರಾಂಪುರ ತಾಂಡಾ	41.	ಕರುವಿನಹಳ್ಳಿ
14.	ಬಳಗಾನೂರ	42.	ಹಿಂಬಾಳ
15.	ಬಂಡಾಳ	43.	ಯಂಕಂಜ
16	ಓತಿಹಾಳ	44.	ಮಡವಾಳ
17.	ಬಂಧನಾಳ	45.	ಅಂತರಗಂಗಿ
18.	ಚಿಕ್ಕರೂಗಿ	46.	ಬಂಕಲಗಿ

ಕ್ರ.ಸಂ.	ಗ್ರಾಮದ ಹೆಸರು	ಕ್ರ.ಸಂ.	ಗ್ರಾಮದ ಹೆಸರು
19.	ಹಾಲಗುಂಡಕನಾಳ	47.	ಬ್ಯಾಳಿಹಾಳ
20.	ಹೊನ್ನಳ್ಳಿ	48.	ಹಿರೆಯರಗಲ್
21.	ಅಲಗೊಡ	49.	ರಾಂಪುರ
22.	ಯಲಗೊಡ	50.	ಗಣಿಹಾರ
23.	ದವಲಾರ	51.	ಹಿಕ್ಕನಗುತ್ತಿ ತಾಂಡಾ
24.	ಸಾಸಬಾಳ	52.	ಸೋಮಾಪೂರ
25.	ಗುಬ್ಬೇವಾಡ	53.	ಬುದಿಹಾಳ
26.	ಬ್ಯಾಕೋಡ	54.	ಗುಡಿಹಾಳ
27.	ಯರಗಲ್	55.	ಚಟ್ಟರಕಿ
28.	ಯರಗಲ್ (ಬಿ.ಕೆ.)	56.	ರೂಗಿ ತಾಂಡ

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ ಒಂದು ಮಾತನ್ನು ನಾನು ಸಚಿವರ ಗಮನಕ್ಕೆ ತರಬಯಸುತ್ತೇನೆ. ಏಕೆಂದರೆ ದಯಮಾಡಿ ತಾವು ಅನ್ಯಥಾ ಭಾವಿಸಬಾರದು. ನಿಮ್ಮ ಮೇಲೆ ಛಾರ್ಜ್ ಮಾಡುತ್ತೇನೆ ಎಂದಲ್ಲ. ಗುತ್ತಿ ಬಸವಣ್ಣ it is on lift irrigation project. ಇದು ಯು.ಕೆ.ಪಿ. ಯಲ್ಲಿ ಬರತಕ್ಕಂಥದ್ದು. ಯುಕೆಪಿಯ ಬಗ್ಗೆ ತಾವು ರಿವ್ಯೂ ಮಾಡಿದ್ದೀರಿ. ಏಕೆಂದರೆ ವೈಯಕ್ತಿಕವಾಗಿ ತಾವು ಸ್ಟೇಟ್ ತುಂಬಾ ಅಡ್ಡಾಡಿದ್ದೀರಿ. ಈ ಬಗ್ಗೆ ರಿವ್ಯೂ ಕೂಡ ಮಾಡಿದ್ದೀರಿ. ಫ್ಲೋ ಇರಿಗೇಶನ್‌ನಲ್ಲಿ 90 ಪರ್ಸೆಂಟ್ ಅಲ್ಲ, 99 ಪರ್ಸೆಂಟ್ ಪ್ರೋಗ್ರೆಸ್ ಆಗಿದೆ. ಲಿಫ್ಟ್ ಇರಿಗೇಶನ್ ಸ್ಕೀಮ್‌ಗಳು ಏನಿವೆ ಅದರಲ್ಲಿ not even 10% progress ಇಲ್ಲ. ಇತ್ತೀಚಿನ ದಿನಮಾನಗಳಲ್ಲಿ ಹತ್ತು ಪರ್ಸೆಂಟ್‌ನಿಂದ 25 ಪರ್ಸೆಂಟ್‌ವರೆಗೆ ಆಗಿರಬಹುದು. ಈ ಎಲ್ಲಾ ಲಿಫ್ಟ್ ಇರಿಗೇಶನ್ ಸ್ಕೀಮ್‌ಗಳು ಏನಾಗಿವೆಯೆಂದರೆ ಸ್ಕೀಂ 'ಎ' ನಲ್ಲಿ ಬಿಜಾಪುರ ಜಿಲ್ಲೆಗೆ ಏನು ಬರುತ್ತವೆ ಅವೆಲ್ಲಾ ಸ್ಕೀಂ 'ಎ' ನಲ್ಲಿ ಇರತಕ್ಕಂಥ ಲಿಫ್ಟ್ ಇರಿಗೇಶನ್ ಸ್ಕೀಂಗಳು. 2000ನೇ ಇಸವಿಯಲ್ಲಿಯೇ ಮುಗಿಯಬೇಕಾಗಿದ್ದಂಥ ಯೋಜನೆಗಳನ್ನು 2007ರ ಮಾರ್ಚ್‌ಗೆ ಮುಗಿಸುತ್ತೇವೆ ಎಂದು ತಾವೇ ಬರೆದುಕೊಟ್ಟಿದ್ದೀರಿ. ಇದೇ ಯೋಜನೆಯನ್ನು 2003ಕ್ಕೆ ಮುಗಿಸುತ್ತೇವೆ ಎಂದು ಹಿಂದಿನ ನೀರಾವರಿ ಸಚಿವರು ಹೇಳಿದ್ದರು. ಅದರ ನಂತರ 2004ಕ್ಕೆ ಮುಗಿಸುತ್ತೇವೆ ಎಂದು ಒಬ್ಬರು ಹೇಳಿದ್ದರು. 2005ಕ್ಕೆ ಮುಗಿಸುತ್ತೇವೆ ಎಂದು ಹೇಳಿದ್ದರು. 2006ಕ್ಕೆ ಎಂದು ಹೇಳಿದ್ದರು. ಆದರೆ ಈಗ ತಾವು 2007ಕ್ಕೆ ಹೋಗಿದ್ದೀರಿ. ಇದು ಏನಾಗುತ್ತದೆಂದರೆ ನಿಮಗೆ ಗೊತ್ತಿದೆ, ಈಗ ಟ್ರಿಬ್ಯುನಲ್ ಮುಂದೆ ರಾಜ್ಯದ ವಾದ ನಡೆದಿದೆ. ಯಾವುದು ಅನ್-ಯುಟಿಲೈಸ್ಡ್ ವಾಟರ್ ಇದೆ ಅದನ್ನು ಅವರು ಉಪಯೋಗ ಮಾಡಿಲ್ಲದ್ದರಿಂದ ಅದನ್ನು ನಮಗೆ ಕೊಡಿ ಎಂದು ಆಂಧ್ರದವರು ಒಂದು ಕಡೆ ಹೋರಾಟ ಮಾಡುತ್ತಿದ್ದಾರೆ. ಇಂಥದ್ದರಲ್ಲಿ

ನಮ್ಮ ಜಿಲ್ಲೆಗೆ ಏನು ಭಯವೆಂದರೆ ಯಾವ ಲಿಫ್ಟ್ ಇರಿಗೇಶನ್‌ಗಳನ್ನು, ಫ್ಲೋ ಇರಿಗೇಶನ್‌ಗಳನ್ನು ತಾವು ತೆಗೆದು ನೋಡಬಹುದು, ಯು.ಕೆ.ಪಿ. ಯಲ್ಲಿ ಮ್ಯಾಕ್ಸಿಮಮ್ ಫ್ಲೋ ಇರಿಗೇಶನ್ ರಾಯಚೂರು, ಗುಲ್ಬರ್ಗಾಕ್ಕೆ ಹೋಗಿದೆ. 99 ಪರ್ಸೆಂಟ್ ಅದೇ ಜಿಲ್ಲೆಗೆ ಹೋಗಿದೆ. ನಮ್ಮಲ್ಲಿ ಆಲಮಟ್ಟಿ ಅಣೆಕಟ್ಟು ಕಟ್ಟಿ ನಮ್ಮನ್ನೆಲ್ಲಾ ಲಿಫ್ಟ್ ಇರಿಗೇಶನ್‌ನಲ್ಲಿ ಹಾಕಿ ಒಂದೂ ಯೋಜನೆಗಳನ್ನು ಇದುವರೆಗೆ ಕಾರ್ಯಗತ ಮಾಡಿಲ್ಲ ಇದು ನಮ್ಮ ಜಿಲ್ಲೆಗೆ ಆಗಿರತಕ್ಕಂಥ ಮೊದಲನೆಯ ಅನ್ಯಾಯವೆಂದು ನಾನು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ. ಎರಡನೆಯದು, ಈಗ ಹೇಳುವುದೇನೆಂದರೆ ನಿನ್ನೆಯ ದಿನದ ಹಿಂದೂಪೇಪರ್‌ನ್ನು ತಾವು ತೆಗೆದುನೋಡಬಹುದು. ನಿನ್ನೆ ಪ್ಲಾನಿಂಗ್ ಕಮಿಶನ್‌ನವರು ಆಂಧ್ರದ ಬಜೆಟ್‌ನ್ನು ಅಪ್ರೋವ್ ಮಾಡಿದ್ದಾರೆ. 28% hike in annual plan outlay of Andhra Pradesh ಎಂದು ಅವರು ಹೇಳಿದ್ದಾರೆ. ಆಂಧ್ರದಲ್ಲಿ ಇಲ್‌ಲೀಗಲ್ ಇರಿಗೇಷನ್ ಪ್ರಾಜೆಕ್ಟ್‌ಗಳು ಎಷ್ಟು ಇವೆ? ಬಹುತೇಕ ಅವು ಅಪ್ರೂವ್ ಆಗಿವೆ ಎಂದು ನನಗೆ ಅನಿಸುತ್ತದೆ. ಈ ಪ್ಲಾನಿಂಗ್ ಕಮಿಷನ್ ಮುಂದೆ ಅಪ್ರೂವ್ ಆಗಿವೆ. ಏಕೆಂದರೆ ಅಹ್ಲುವಾಲಿಯಾರವರು ಆಂಧ್ರದವರಿಗೆ ಕಾಂಪ್ಲಿಮೆಂಟ್ ಮಾಡಿದ್ದಾರೆ. ಅವರು ಪ್ಲಾನ್ ಔಟ್‌ಲೇನಲ್ಲಿ 51 ಪರ್ಸೆಂಟ್ ಇರಿಗೇಷನ್‌ಗೆ ಅಲೋಕೇಷನ್ ಕೊಟ್ಟಿದ್ದಾರೆ. ಆದರೆ ನೀವು 26 ಪರ್ಸೆಂಟ್ ಕೂಡ ಕೊಟ್ಟಿಲ್ಲ. ನನಗನಿಸುತ್ತದೆ, ನಿಮ್ಮ ಪ್ಲಾನ್ ಔಟ್‌ಲೇ ಪ್ರಕಾರ ದುಡ್ಡು ಹೆಚ್ಚಿಗೆ ಕೊಟ್ಟರಬಹುದು, ಆದರೆ ಪ್ಲಾನ್ ಸೈಜ್‌ನ ಪ್ರಕಾರ ನೀವು ದುಡ್ಡು ಅಲೋಕೇಟ್ ಮಾಡಿಲ್ಲವೆನ್ನುವುದು ಎರಡನೆ ವಾದ. ಈ ಎಲ್ಲಾ ವಿಚಾರಗಳನ್ನು ಗಮನದಲ್ಲಿ ಇಟ್ಟುಕೊಂಡು ಇನ್ನು ಮುಂದೆ ಹೇಗೆ ನಡೆಯುತ್ತದೆ ಹಾಗೂ ನಿಮ್ಮ ಅಭಿಪ್ರಾಯ ಏನಿದೆ ಎನ್ನುವುದನ್ನು ಈ ಸಭೆಗೆ ತಿಳಿಸಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವಾನಂದ ಪಾಟೀಲರು ಪೂರ್ಣವಾಗಿ ನಾನೇನು ಹೇಳಬೇಕಾಗಿತ್ತು ಅದನ್ನು ಅವರೇ ಹೇಳಿದ್ದಾರೆ. ತಾವು ನನ್ನನ್ನು ಪ್ಲಾನಿಂಗ್ ಏನು ಎಂದು ಕೇಳುತ್ತಿದ್ದೀರಿ? ಕಾನೂನು ಪ್ರಕಾರ ಟ್ರಿಬ್ಯೂನಲ್‌ನಲ್ಲಿ ಏನಾಗಬೇಕಾಗಿದೆ ಈ ಎಲ್ಲಾ ಅಂಶಗಳನ್ನು ತಾವೇ ಹೇಳಿರುವುದರಿಂದ ಅದರ ಬಗ್ಗೆ ನಾನು ಉತ್ತರ ಕೊಟ್ಟಿದ್ದು ಅಷ್ಟೆ ಇದೆ. 2002ರಲ್ಲಿ ಮುಗಿಸುತ್ತೇವೆಂದರೂ 2004ರಲ್ಲಿ ಮುಗಿಸಿ ಕೊಡುತ್ತೇನೆ ಎಂದರೂ, ಎಂದು ಹೇಳಿದರು. ನಿಜ ಯಾವುದೇ ನೀರಾವರಿ ಸಚಿವರು ಬಂದಾಗ ಅವರು ಒಂದು ಟಾರ್ಗೆಟ್ ಇಟ್ಟುಕೊಂಡಿರುತ್ತಾರೆ ಆ ಪ್ರಕಾರ ಸರ್ಕಾರದ ಅಪೇಕ್ಷೆ ಏನಿರುತ್ತದೋ ಅದನ್ನು ಹೇಳುತ್ತಾರೆ. ನಾನು ಹೇಳುವುದೇನೆಂದರೆ ನಮ್ಮ ಸರ್ಕಾರ ಈ ಸಾರಿ ನೀರಾವರಿ ಯೋಜನೆಗೆ ಹಣವನ್ನು ಕೂಡ ಜಾಸ್ತಿ ಇಟ್ಟಿರುವುದು ಗೊತ್ತಿದೆ. ಅದರಲ್ಲಿ ಕೆಲವು ಜಾಸ್ತಿಯಾಗಿದೆ, ನೀವು ಇಟ್ಟಿರುವಂತಹ ಪರ್ಸಂಟೇಜ್ ವ್ಯತ್ಯಾಸವಾಗಿದೆ ಎಂದು ಹೇಳುತ್ತೀರಿ ವಿನಃ ಇಟ್ಟಿರುವಂತಹ ಹಣ ಜಾಸ್ತಿ ಇಲ್ಲವೆಂದು ಯಾರೂ ಹೇಳುತ್ತಿಲ್ಲ. ಈಗಾಗಲೇ ಈ ರಾಜ್ಯದ ಒಟ್ಟು 39 ಯೋಜನೆಗಳಲ್ಲಿ

ಯಾವ್ಯಾವುದನ್ನು ಮುಗಿಸಬೇಕೆಂದು ಇತ್ತು, ಅವೆಲ್ಲವನ್ನೂ ಕೂಡ ಸೇರಿಸಿಕೊಂಡು 39 ಯೋಜನೆಗಳನ್ನು ಈ ವರ್ಷದಲ್ಲಿ ಮುಗಿಸುತ್ತಿದ್ದೇವೆ. ನಮ್ಮ ಯೋಜನೆ ಇರುವುದು ಕೂಡ ಅದೆ. ಅದಕ್ಕೋಸ್ಕರ ನಿಮ್ಮ ಜಿಲ್ಲೆಯಲ್ಲಿ ಲಿಫ್ಟ್ ಇರಿಗೇಷನ್‌ಗೆ 10 ಪರ್ಸೆಂಟ್ ಕೂಡ ಪ್ರೋಗ್ರೆಸ್ ಆಗಿಲ್ಲ ಎನ್ನುವಂತಹ ಅಂಶಗಳನ್ನು ತಾವೇನು ಹೇಳುತ್ತಿದ್ದೀರಿ, ಅದರ ಜೊತೆಗೆ ಈ ಒಂದು ಯೋಜನೆಯನ್ನು ತಾವು ಗಮನಕ್ಕೆ ತಂದಿದ್ದೀರಿ, ಇದನ್ನು ನಾವು 2007ನೇ ಸಾಲಿಗೆ ಮುಗಿಸುತ್ತೇವೆ. ಮತ್ತು ಈ 39 ಯೋಜನೆಗಳನ್ನು ಏನು ಹಾಕಿಕೊಂಡಿದ್ದೇವೆ ಆ ಯೋಜನೆಗಳನ್ನು ಕೂಡ ನಾವು ಪೂರ್ಣವಾಗಿ ಮುಗಿಸುತ್ತೇವೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, All successive Governments, ನಾನು ನಿಮ್ಮ ಮೇಲೆ ಚಾರ್ಜ್ ಮಾಡುತ್ತಿಲ್ಲ. ಯಾರು ಬರುತ್ತಾರೆ ಅವರು 2003ಕ್ಕೆ ಮುಗಿಸುತ್ತೇವೆ ಎಂದು ಹೇಳುತ್ತಾರೆ. ಯಾರು ಅಧಿಕಾರಕ್ಕೆ ಬರುತ್ತಾರೆ ಅವರು 2004ಕ್ಕೆ ಮುಗಿಸುತ್ತೇವೆ ಎಂದು ಹೇಳುತ್ತಾರೆ. ಪುನಃ ಯಾರು ಅಧಿಕಾರಕ್ಕೆ ಬರುತ್ತಾರೆ ಅವರು 2005ಕ್ಕೆ ಮುಗಿಸುತ್ತೇವೆ ಎಂದು ಹೇಳುತ್ತಾರೆ. ಆದರೆ ನೀವು 2006ನೇ ಸಾಲಿನಲ್ಲಿ ಮುಗಿಸುತ್ತೀರಿ ಎಂದು ಆಶಯವನ್ನು ಇಟ್ಟುಕೊಂಡಿದ್ದೆ. ಆದರೆ ನೀವು 2007ನೇ ಸಾಲಿಗೆ ಮುಗಿಸುತ್ತೇವೆ ಎಂದು ಹೇಳಿದ್ದೀರಿ. ಆದರೆ ಮಾರ್ಚ್ 2007ಕ್ಕೆ ಈ ಲಿಫ್ಟ್ ಇರಿಗೇಷನ್ ಮುಗಿಯುವುದಿಲ್ಲ ನಾನು ಇವತ್ತೆ ಬರೆದುಕೊಡುತ್ತೇನೆ ನಿಮಗೆ, aggressive ಆಗಿ ತಾವು ಇವರನ್ನು ಬೆನ್ನತ್ತಿದರೆ ಮಾತ್ರ ಈ ಯೋಜನೆಗಳು ಮುಗಿಯುತ್ತವೆ. ಇಲ್ಲದೆ ಇದ್ದರೆ ನಿಮಗೆ ಗೊತ್ತಿದೆ ಮಹಾಜಲ ಯಜ್ಞ ಎಂದು ಮಾನ್ಯ ರಾಜಶೇಖರ ರೆಡ್ಡಿಯವರು ಒಂದು ಯೋಜನೆಯನ್ನು ಪ್ರಾರಂಭ ಮಾಡಿದರು. ಅದರಲ್ಲಿ ಎಲ್ಲಾ ಇಲ್‌ಲೀಗಲ್ ಪ್ರಾಜೆಕ್ಟ್‌ಗಳು ಇವೆ. 20 ಸಾವಿರ ಕೋಟಿ ರೂಪಾಯಿ ಯೋಜನೆಗಳನ್ನು ಅವರು ಕೈಗೆತ್ತಿಕೊಂಡಿದ್ದಾರೆ. ಆದರೆ ಈ ಯೋಜನೆಗಳ ಬಗ್ಗೆ ನನಗಿಂತ ತಮಗೆ ಹೆಚ್ಚು ಗೊತ್ತಿದೆ, ಯಾರ್ಯಾರು ಕೈಗೆತ್ತಿಕೊಂಡಿದ್ದಾರೆ ಅವುಗಳು ಪ್ಲಾನಿಂಗ್ ಕಮಿಷನ್‌ನಿಂದ ಕೂಡ ಅಪ್ರೂವ್ ಆಗುತ್ತಿದೆ. ಆದರೆ ನಮಗೆ ಏನು ಭಯವೆಂದರೆ ನಮ್ಮ ಬಿಜಾಪುರ ಜಿಲ್ಲೆಗೆ ಹಿಂದೆ ಬಚಾವತ್ ಅವಾರ್ಡ್‌ನಲ್ಲಿ ಏನು ನೀರು ಅಲೋಕೇಟ್ ಆಯಿತು, ಆ ಪ್ರಕಾರ ನಮಗೆ ದೊರೆಯುತ್ತದೋ ಇಲ್ಲವೋ ಗೊತ್ತಿಲ್ಲ. ಆಲಮಟ್ಟಿ ಡ್ಯಾಂ ನಮ್ಮ ಜಿಲ್ಲೆಯಲ್ಲಿ ಕಟ್ಟಿದ್ದಾರೆ. ನಮಗೆ ನಿಮಗೆ ಗೊತ್ತಿದೆ 1,37,000 ಹೆಕ್ಟೇರ್ ಜಮೀನು ಮುಳುಗಿ ಹೋಗಿದೆ. ಆದರೆ ನಮಗೆ ಸಿಕ್ಕಿರತಕ್ಕಂಥ ನೀರು ಎಷ್ಟು ಗೊತ್ತಾ ನಿಮಗೆ? ಅದು ಬಹಳ ದುಃಖದ ವಿಷಯ ನಾನು ಹೇಳುವುದೇನೆಂದರೆ ರಾಯಚೂರು ಹಾಗೂ ಗುಲ್ಬರ್ಗದವರು ನೀರಾವರಿ ಮಾಡಿಕೊಳ್ಳಬಾರದು ಎಂದಲ್ಲ, ಮಾಡಿಕೊಳ್ಳಲಿ ಅವರು 5 ಲಕ್ಷ ಹೆಕ್ಟೇರ್ ನೀರಾವರಿ ಮಾಡಿಕೊಂಡರು. ಆದರೆ ನಮ್ಮ ಕಡೆ ಇನ್ನು ಕೂಡ ಒಂದು ಲಕ್ಷ ಹೆಕ್ಟೇರ್‌ವರೆಗೆ ನೀರಾವರಿ ಆಗಿಲ್ಲ. ರಾಯಚೂರು ಹಾಗೂ ಗುಲ್ಬರ್ಗ ಜಿಲ್ಲೆಗಳ ಜಮೀನು ಮುಳುಗಿರತಕ್ಕಂಥದ್ದು ಇದೆಯಾ ಎಂದರೆ ಅದೂ ಇಲ್ಲ. ಎಂಟೈರ್ ಭೂಮಿ

ಮುಳುಗಿರತಕ್ಕಂಥಾದ್ದು ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳದ್ದು. ನಾನು ಕೇಳುವುದೇನೆಂದರೆ ಲಿಫ್ಟ್ ಇರಿಗೇಷನ್‌ನಲ್ಲಿ ಹಿಂದಿನವರು ಹಾಕಿ ಹೋಗಿಬಿಟ್ಟರು. ಹಿಂದಿನವರು ಏನೋ ಅನ್ಯಾಯ ಮಾಡಿದರು, ಅದನ್ನು ಮಾಡಬಾರದಾಗಿತ್ತು, ಮಾಡಿದ್ದಾರೆ. ಅದನ್ನು ನಾನು ಈಗ ಕೆಣಕುವುದಕ್ಕೆ ಹೋಗುವುದಿಲ್ಲ. ಆದರೆ ನಮಗೆ ಏನು ಅನ್ಯಾಯವಾಗಿದೆ ನಮ್ಮನ್ನು ಗುಲಾಟಿ ಕಮಿಷನ್ ಹಿಡಿದುಕೊಂಡು, ನಿಮಗೆ ಹೇಳಬೇಕಾದರೆ ಹಿಂದಿನ ಸೆಂಟ್ರಲ್ ಮಿನಿಸ್ಟರ್ ನೆಹರು ಕೂಡ ಬಿಜಾಪುರಕ್ಕೆ ಬಂದು ಲಿಫ್ಟ್ ಇರಿಗೇಷನ್ ಮಾಡಿ ಬಿಜಾಪುರಕ್ಕೆ ನೀರಾವರಿಯನ್ನು ಒದಗಿಸಿಕೊಡುತ್ತೇವೆ ಎನ್ನುವಂತಹ ಮಾತನ್ನು ಆಡಿ ಹೋಗಿದ್ದಾರೆ. ಲಾಲ್ ಬಹದ್ದೂರ್ ಶಾಸ್ತ್ರಿಯಿಂದ ನೆಹರುವರೆಗೆ ಎಲ್ಲಾ ಹೇಳಿದ್ದಾರೆ. ಆದರೆ ದುರ್ದೈವದಿಂದ ನಮ್ಮ ಜಿಲ್ಲೆಗೆ ಒಂದು ಹನಿ ನೀರು ಕೂಡ ಲಿಫ್ಟ್ ಇರಿಗೇಷನ್‌ನಲ್ಲಿ ಸೇರಿಸಿರುವುದರಿಂದ ನೀರಾವರಿ ಆಗುತ್ತಿಲ್ಲ, ಅದೊಂದು, ಇನ್ನು ಎರಡನೆಯದಾಗಿ, ಮಹಾಜಲ ಯಜ್ಞ ಯೋಜನೆ ಎನ್ನುವಂತಹ ಯೋಜನೆಯನ್ನು ಕೈಗೆತ್ತಿಕೊಂಡು ಪ್ಲಾನ್ ಔಟ್‌ಲೇನಲ್ಲಿ 51 ಪರ್ಸೆಂಟ್ ಆಂಧ್ರದವರು ಇರಿಗೇಷನ್‌ಗೆ ಇಟ್ಟಿದ್ದಾರೆ. ಅದು ಅವರು ಇಟ್ಟಿರುವುದು ಟೋಟಲ್ ಪ್ಲಾನ್‌ನಲ್ಲಿ, ಆದರೆ ಕರ್ನಾಟಕದವರು 24 ಅಥವಾ 26 ಪರ್ಸೆಂಟ್ ಇಟ್ಟುಕೊಂಡು ಒಬ್ಬೊರಿಗೊಬ್ಬರು ಭುಜ ಚಪ್ಪರಿಸಿಕೊಳ್ಳುತ್ತಿದ್ದೀರಿ. ಅದರ ಬಗ್ಗೆ ನಾನು ಕಾಮೆಂಟ್ ಮಾಡಬೇಕೆಂದು ಇಲ್ಲ. ಅದರ ಬಗ್ಗೆ ನಿಮ್ಮ ಒಂದು ಗುರಿ ಅಥವಾ ಹಿಂದೆ ಆಗಿರುವಂತಹ ತಪ್ಪನ್ನು ಸರಿದೂಗಿಸಿ ನಾನೇನಾದರೂ ಮಾಡಬೇಕು ಎಂದು ಛಲ ಇದ್ದರೆ, ದಯಮಾಡಿ ನಿಮ್ಮ ವ್ಯೂವ್ಸ್ ಅನ್ನು ಈ ಸಭೆಗೆ ತಿಳಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಧರಂಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಾನು ಬಜೆಟ್‌ನಲ್ಲಿ ಭಾಷಣ ಮಾಡತಕ್ಕಂಥ ಸಂದರ್ಭದಲ್ಲಿ ಹೇಳಿದ್ದೆ. ಹೋದಸಲ ಮುಖ್ಯಮಂತ್ರಿಯಾದಾಗ ಮಾನ್ಯ ಅನಂತ ಕುಮಾರ್‌ರವರು ರಾಷ್ಟ್ರೀಯ ಭಾಜಪ ಪಕ್ಷದ ಪ್ರಧಾನ ಕಾರ್ಯದರ್ಶಿಗಳು ಒಂದು ಸ್ಟೇಟ್‌ಮೆಂಟ್ ಕೊಟ್ಟರು. ಇಲ್‌ಲೀಗಲ್ ಪ್ರಾಜೆಕ್ಟ್‌ಗಳನ್ನು ಆಂಧ್ರ ಪ್ರದೇಶದವರು ಮಾಡುತ್ತಿದ್ದಾರೆಂದು ಹಾಗೂ ಈ ಸರ್ಕಾರ ಸುಮ್ಮನೆ ಕುಳಿತಿದೆ ಎಂದು ತಾವು ಹಾಗೂ ಇವತ್ತಿನ ಮಾನ್ಯ ಉಪ ಮುಖ್ಯ ಮಂತ್ರಿಗಳು ಸಾಕಷ್ಟು ಗಲಾಟೆ ಮಾಡಿದಿರಿ. ನಾವು ಸರ್ವಪಕ್ಷದ ನಿಯೋಗವನ್ನು ತೆಗೆದುಕೊಂಡು ಪ್ರಧಾನ ಮಂತ್ರಿಗಳ ಹತ್ತಿರ ಹೋಗಿ, ಆಂಧ್ರಪ್ರದೇಶದವರು ಅಲ್ಲಿ ಯಾವ ಪ್ರಾಜೆಕ್ಟ್‌ಗೂ ಪ್ಲಾನಿಂಗ್ ಕಮಿಷನ್ ಅಪ್ರೂವ್ ಕೊಟ್ಟಿಲ್ಲ ಅದನ್ನು ಅವರು ಮಾಡುತ್ತಿದ್ದಾರೆಂದು ಹೇಳಿದ್ದೇವೆ. ಆಗ ಮಾನ್ಯ ಖರ್ಗೆಯವರು ನೀರಾವರಿ ಸಚಿವರಾಗಿದ್ದರು, ಎಲ್ಲರೂ ಕೂಡ ಸಮಾಲೋಚನೆ ಮಾಡಿ, ಮಾನ್ಯ ಪ್ರಧಾನ ಮಂತ್ರಿಗಳಿಗೆ ಕೊಟ್ಟಿದ್ದೇವೆ. ಕೇಂದ್ರದಲ್ಲಿ ಪ್ರಿಯರಂಜನ್ ದಾಸ್ ಮುನ್ಷಿ ಅವರನ್ನು ನೀರಾವರಿ ಸಚಿವರನ್ನಾಗಿ ಮಾಡಿದ್ದಾರೆ. ಈಗ ನಾನು ಬಜೆಟ್‌ನಲ್ಲಿ ಏನು ಹೇಳಿದ್ದೆನೆಂದರೆ ಪರ್ಸೆಂಟೇಜ್‌ವೈಸ್ 2004–05 ರಲ್ಲಿ 13,556 ಕೋಟಿ. That was

our budget. ಪ್ಲಾನ್ ಡಿಸ್‌ಕಷನ್ ಮಾಡುವಾಗ ಹೋದಾಗಲೂ ಕೂಡ 16,166 ಕೋಟಿ, you have provided. ಆ ಒಂದು ಆಧಾರದ ಮೇಲೆ ನಾವು ಹೆಚ್ಚಿನ ಹಣವನ್ನು ಕೊಟ್ಟಿದ್ದೇವೆ ಕೃಷಿಗೆ ಹಾಗೂ ನೀರಾವರಿಗೆ ಎಂದು ಹೇಳಿದ್ದೇವೆ. ನೀವು ಬಜೆಟ್‌ನಲ್ಲಿ ನೋಡಿ, ನಾವೇನು ಪ್ರೊವೈಡ್ ಮಾಡಿದ್ದು ಎಂದರೆ 29 ಪರ್ಸೆಂಟ್ ಹೈಕ್. ನೀವು ಮಾಡಿದ್ದು ಈ ಸಾರಿ 26 ಪರ್ಸೆಂಟ್ ಹೈಕ್. ಇವತ್ತು ಅವರು ಏನು ಕೇಳುತ್ತಿದ್ದಾರೆ ಬಿಜಾಪುರ ಭಾಗದಲ್ಲಿ ಬೇರೆ ಕಡೆಗೆ ನಾವು 2006ರಲ್ಲಿ ಇನ್‌ಕಂಪ್ಲೀಟೆಡ್ ಪ್ರಾಜೆಕ್ಟ್ ಕಂಪ್ಲೀಟ್ ಮಾಡುತ್ತೇವೆಂದು ನಾವು ಮೊದಲೇ ಹೇಳಿದ್ದೇವೆ. 1972ರಲ್ಲಿ ಪ್ರಾರಂಭ ಆದಂತಹ ಕಾರಂಜಾ ಪ್ರಾಜೆಕ್ಟ್ 9 ಕೋಟಿ ರೂಪಾಯಿ. We have spent 407 crores. ಯಾವುದೇ ಸರ್ಕಾರ ಇರಲಿ, ಅಲ್ಲಿ ಕಾರಂಜಾ ಕೂಡ ಮುಗಿಯುತ್ತಿದೆ ತಾವು ಕೂಡ ಆ ಭಾಗದಲ್ಲಿ ಹೋಗಿ ಬಂದಿದ್ದೀರಿ. ಇವತ್ತು ಕೃಷ್ಣ ಬೇಸಿನ್‌ನಲ್ಲಿ ಇರುವಂತಹ ಪ್ರಾಜೆಕ್ಟ್‌ಗಳು ಆಂಧ್ರಪ್ರದೇಶದವರು ಇವತ್ತು ಪ್ಲಾನಿಂಗ್ ಕಮಿಷನ್ ಮುಂದೆ ಹೋಗುತ್ತಿದ್ದಾರೆ. That is our duty, because ಏಕೆಂದರೆ ಆ ಭಾಗದಲ್ಲಿ ಬಂದಂತಹ ಶಿವಾನಂದ ಪಾಟೀಲರು ಚೆನ್ನಾಗಿ ತಿಳಿದುಕೊಂಡು ಗುಲಾಟೆ ಕಮಿಷನ್ ಬೇರೆಯದರಲ್ಲಿ ಕೂಡ ಯಾವ್ಯಾವ ರೀತಿಯಲ್ಲಿ ನಮೂದು ಮಾಡಿದ್ದಾರೆ ಎಂದು ಹೇಳಿದ್ದಾರೆ. ಇವತ್ತು ತಾವು ಬಹಳ ಮಹತ್ವದ ಖಾತೆಯನ್ನು ವಹಿಸಿಕೊಂಡಿದ್ದೀರಿ, ತಾವೇನು ಹೇಳಿದ್ದೀರಿ. ಅದೇ ರೀತಿ ಸದನದಲ್ಲಿ ಕೂಡ ಪ್ರತಿಪಾದನೆ ಮಾಡಿದ್ದೀರಿ, ತಾವು ಇವತ್ತಿನ ದಿವಸ ಹೇಳಬೇಕು. ಆಂಧ್ರ ಪ್ರದೇಶದವರು ಮಾಡತಕ್ಕಂಥ ಇಲ್ಲಿಗಲ್ ಪ್ರಾಜೆಕ್ಟ್‌ಗಳು ಏನಿವೆ ಅದಕ್ಕೆ ಇವತ್ತು ಈ ನಿಮ್ಮ ಸರ್ಕಾರದವರು ಏನು ಮಾಡುತ್ತಿದ್ದಾರೆ? ಮಾನ್ಯ ಮುಖ್ಯಮಂತ್ರಿಗಳು ಏನು ಮಾಡುತ್ತಿದ್ದಾರೆ? ನೀವು ನಿಯೋಗವನ್ನು ಕರೆದುಕೊಂಡು ಹೋಗಿ ಭೇಟಿಯಾಗಿದ್ದೀರಾ? ಈ ರೀತಿ ಇಲ್ಲಿಗಲ್ ಪ್ರಾಜೆಕ್ಟ್ ಅನ್ನು ಆಂಧ್ರದವರು ಮಾಡುತ್ತಿದ್ದಾರೆ ಎಂದು ಹೇಳಿದ್ದೀರಾ? ಆಗ ಮಾನ್ಯ ಜಗದೀಶ್ ಶೆಟ್ಟರ್‌ರವರು ಇಲ್ಲಿ ಕುಳಿತು ಬಹಳ ಜೋರಾಗಿ ಹೇಳಿದಿರಿ. ಅದಕ್ಕೆ ಇವತ್ತಿನ ನಿಮ್ಮ ಸರ್ಕಾರದ ನಿಲುವು ಏನಿದೆ? ಅದನ್ನು ಸ್ಪಷ್ಟಪಡಿಸಬೇಕೆಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಅಕ್ರಮ ನೀರಾವರಿ ಯೋಜನೆಗಳ ಬಗ್ಗೆ ಹಿಂದಿನ ಸರ್ಕಾರ ಎರಡು ಭಾರಿ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಮಾಡಿತ್ತು. ಈಗಲೂ ತಾವು ಈ ಬಗ್ಗೆ ತೀವ್ರವಾದಂತಹ ಗಮನ ಕೊಟ್ಟು ಕೇಂದ್ರದ ಮೇಲೆ ಒತ್ತಡ ತಂದು, ಸರ್ವ ಪಕ್ಷಗಳ ಸಭೆಯನ್ನು ಬೇಕಾದರೆ ಒಂದು ದಿವಸ ಕರೆಯಿರಿ. ನಮ್ಮದೇನು ಅಭ್ಯಂತರವಿಲ್ಲ. ಆದರೆ ಕೇವಲ ನಿಯೋಗ ಹೋಗುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ನೀವು ನೇರವಾಗಿ ಅಲ್ಲಿ ಆಗುತ್ತಿರುವಂತಹ ಪ್ರಾಜೆಕ್ಟ್‌ಗಳನ್ನು ನಿಲ್ಲಿಸುವುದಕ್ಕೆ ಏನು ಮಾಡುತ್ತೀರಿ ಎಂದು ಸ್ಪಷ್ಟವಾದಂತಹ ನಿರ್ಣಯಗಳನ್ನು ಕೈಗೊಳ್ಳಬೇಕಾಗುತ್ತದೆ. ದಿಟ್ಟತನದಿಂದ ಕೈಗೊಳ್ಳಬೇಕಾಗುತ್ತದೆ. ಇಲ್ಲದೆ ಇದ್ದರೆ ಕರ್ನಾಟಕಕ್ಕೆ ತೀವ್ರ ಅನ್ಯಾಯವಾಗುತ್ತದೆ ಎನ್ನುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) : ಮಾನ್ಯ ಅಧ್ಯಕ್ಷರೆ, ತುಂಬಾ ನೇರವಾಗಿ ತಾವು ಪ್ರಶ್ನೆ ಕೇಳಿದ್ದೀರಿ. ಹಿಂದಿನ ಸರ್ಕಾರದಲ್ಲಿ ಏನೇನಾಗಿದೆ ಅದು ಪ್ರಶ್ನೆ ಬೇರೆ. ನಾನು ಇಷ್ಟೆ ನೇರವಾಗಿ ಹೇಳುತ್ತೇನೆ. ನಾನೇಕೆ 2007 ಮಾರ್ಚ್‌ನಲ್ಲಿ ಮುಗಿಸುತ್ತೇನೆ ಎಂದು ಧೈರ್ಯವಾಗಿ ಹೇಳಿದೆ ಎಂದರೆ ಮೊನ್ನೆ ಸೋಮವಾರದ ದಿನ ಈ 39 ಯೋಜನೆಗಳೇನಿವೆ ಅದರಲ್ಲಿ ಒಂದೊಂದು ಯೋಜನೆಗೆ ಒಬ್ಬೊಬ್ಬ ಎಕ್ಸಿಕ್ಯುಟೀವ್ ಇಂಜಿನಿಯರನ್ನು ನೇಮಕ ಮಾಡಿದ್ದೇವೆ. ಅವರೆಲ್ಲರನ್ನು ಕರೆದು ಒಂದು ಮೀಟಿಂಗ್ ಮೊನ್ನೆ ಮಾಡಿದ್ದೇವೆ. ಆ ಯೋಜನೆಗಳನ್ನು ನೀವು ಯಾವಾಗ ಮುಗಿಸಿಕೊಡಬೇಕು ಎಂದು ಹೇಳಿ ಅವರ ಹತ್ತಿರ ರೈಟಿಂಗ್‌ನಲ್ಲಿ ನಾವು ತೆಗೆದುಕೊಂಡಿದ್ದೇವೆ. ಯಾವ್ಯಾವ ತಿಂಗಳಲ್ಲಿ ಎಷ್ಟೆಷ್ಟು ಕೆಲಸ ಮಾಡುತ್ತೀರಿ ಎಂದು ನಾವು ಕೇಳುತ್ತಿದ್ದೇವೆ. ಮುಂದಿನ ತಿಂಗಳು ಮೀಟಿಂಗ್ ಬಂದಾಗ, ಹಿಂದಿನ ತಿಂಗಳು ಏನು ಮಾಡಲಾಗಿದೆ? ಹಾಗೂ ಮುಂದಿನ ತಿಂಗಳು ಏನು ಮಾಡಬೇಕು ಅದನ್ನು ಕೂಡ ಹೇಳುತ್ತಿದ್ದೇವೆ. ಹೀಗೆ ಆ ಒಂದು ವಿಶ್ವಾಸದಲ್ಲಿ ಪ್ರತಿ ತಿಂಗಳು ರಿವ್ಯೂ ಮಾಡಿ 39 ಯೋಜನೆಗಳನ್ನು ಮಾಡಬೇಕೆಂದು ಅಂದು ಕೊಂಡಿದ್ದೇವೆ. ತಾವು ದಿಟ್ಟವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹಾಗೂ ಇದು ಅಗಲೇಬೇಕೆಂದು ಏನು ಹೇಳಿದ್ದೀರಿ ಆ ಲೆಕ್ಕದಲ್ಲಿ ಹೇಳುತ್ತಿದ್ದೇನೆ. 2007ನೇ ಇಸವಿ ಅಂದರೂ, ಈ ವರ್ಷದಲ್ಲಿ ಮುಗಿಸುತ್ತೇನೆ ಎನ್ನುವಂತಹ ಮಾತನ್ನು ಹೇಳುತ್ತಿದ್ದೇನೆ. ಈ ಒಂದು ಯೋಜನೆಯ ಬಗ್ಗೆ ನಿಮಗೆ ಯಾವುದೇ ರೀತಿಯ ಅನುಮಾನವೂ ಬೇಡ. ನಾನು ಇದನ್ನು ಮಾರ್ಚ್ 2007ರೊಳಗೆ ಖಂಡಿತವಾಗಿ ಮುಗಿಸಿಕೊಡುತ್ತೇನೆ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಹೇಳಿದ್ದಾರೆ, ಮುಂದೆ ಡಿಮಾಂಡ್‌ನಲ್ಲಿ ಹೆಚ್ಚಿನ ಹಣವನ್ನು ಕೊಡುವಂಥಾದ್ದರ ಬಗ್ಗೆ ಹೇಳಿದ್ದಾರೆ. Plan discussion ನಲ್ಲಿ Ahluwalia ರವರು ಏನು ಇದ್ದಾರೆ. Deputy Chairman, Planning Commission has appreciated the step taken by Andhra Pradesh in irrigation. ಅವರು ಏನು ಹೇಳಿದ್ದಾರೆ. Further complementing the State for focusing considerably and creating a additional irrigation capacity. He said Andhra Pradesh has the unique decision of alloting 51% of its outlay to the irrigation sector. ನಾನು ಇದನ್ನು ನೇರವಾಗಿ ಆಪಾದನೆಯನ್ನು ಮಾಡುತ್ತಿಲ್ಲ. ಇವತ್ತು ನೀವು ನೀರಾವರಿ ಸಚಿವರಾಗಿ ಆಂಧ್ರಪ್ರದೇಶದಲ್ಲಿ ಆಗುವಂತಹ ಪ್ರಾಜೆಕ್ಟ್ ಏನು ಇದೆ. ಗೋವಾದ ಬಗ್ಗೆ ಮಾತುಕತೆಗೆ ನಾವು ಬರುತ್ತೇವೆ. ಮತ್ತೆ ಇವತ್ತು ಮಹಾರಾಷ್ಟ್ರದ ಬಗ್ಗೆ, ಈ ಎಲ್ಲಾ ಕಡೆಗೂ ತಾವು ಗಮನವನ್ನು ಕೊಡಬೇಕಾಗುತ್ತದೆ. ಎಲ್ಲಿ ಇಲ್ಲೀಗಲ್ ಪ್ರಾಜೆಕ್ಟ್ಸ್ complete ಮಾಡುವ ರೀತಿಯಲ್ಲಿ plan discussion ಗೆ ಹೋದಾಗ, ಈಗ ಆಂಧ್ರಪ್ರದೇಶದ Chief Minister ಕೂಡ 51% amountಗೆ ಏನು ಪ್ರೊವೈಡ್ ಮಾಡಿದ್ದಾರೆ. ಇದನ್ನು ಗಮನದಲ್ಲಿಟ್ಟುಕೊಂಡು ಕರ್ನಾಟಕ ಸರ್ಕಾರ ಯಾವ

ರೀತಿಯಾಗಿ ಪರಿಣಾಮಕಾರಿಯಾಗಿ, ಕೆಲಸ ನಿರ್ವಹಿಸುವ ಬಗ್ಗೆ ತಾವು ಯಾವ ರೀತಿಯಲ್ಲಿ ನಿಲುವನ್ನು ತಾಳಿದ್ದೀರಿ. What is your plan of action? You have to tell us.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ನಮ್ಮ ಹಿರಿಯ ರಾಜಕಾರಣಿಗಳಾದ ಮಾನ್ಯ ಧರ್ಮಸಿಂಗ್‌ರವರು, ಸ್ನೇಹಿತರಾದ ಮಾನ್ಯ ವಾಟಾಳ್‌ನಾಗರಾಜ್‌ರವರು ಈಗ ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಇದು ಇಡೀ ಕರ್ನಾಟಕ ರಾಜ್ಯದ ಗಮನವನ್ನು ಸೆಳೆದಿರುವಂತಹ ಅಂಶವಾಗಿದೆ. ಇವತ್ತು ಮಾನ್ಯ ಶಿವಾನಂದ ಎಸ್. ಪಾಟೀಲ್‌ರವರು ಹೇಳಿದಂತೆ, ಆಂಧ್ರಪ್ರದೇಶದಲ್ಲಿ ಇಲ್ಲೀಗಲ್ ಯೋಜನೆಗಳ ಬಗ್ಗೆ, ಅಪ್ರೂವಲ್ ಕೂಡ ಆಗಿರಬಹುದೆಂದು, ಸುಮಾರು ಇಪ್ಪತ್ತು ಸಾವಿರ ಕೋಟಿ ರೂಪಾಯಿಗಳಷ್ಟು ಅಪ್ರೂವಲ್ ಆಗಿರಬಹುದೆಂಬ ಮಾತನ್ನು ಹೇಳುತ್ತಿದ್ದಾರೆ. ಮಾನ್ಯ ಧರ್ಮಸಿಂಗ್‌ರವರು ಕೂಡ ಇದರ ಬಗ್ಗೆ ಆಂಧ್ರಪ್ರದೇಶದವರು ಮಾಡುತ್ತಿರುವುದರ ಬಗ್ಗೆ, ತಾವು ಏನು ಕ್ರಮವನ್ನು ತೆಗೆದುಕೊಳ್ಳುತ್ತಿದ್ದೀರೆಂಬ ಅಂಶವನ್ನು ಅವರು ಹೇಳುತ್ತಿದ್ದಾರೆ. ಈಗಾಗಲೇ ನಾವು ಆಂಧ್ರ ಪ್ರದೇಶದಲ್ಲಿ interim appeal ಅನ್ನು ಹಾಕಿದ್ದೇವೆ. ಈ ವಿಷಯ ತಮಗೂ ಗೊತ್ತಿರುವಂಥಾದ್ದೆ, ಗೊತ್ತಿಲ್ಲದೇ ಇರುವ ಅಂಶ ಏನು ಅಲ್ಲ. ಇದರ ಜೊತೆಗೆ ಈ ಬಗ್ಗೆ ಒಂದು ಡಿಸಿಷನ್ ಕೂಡ ಆಗಬೇಕೆಂಬ ಅಂಶವನ್ನು ತಾವು ಕೇಳಿದ್ದೀರಿ. Interim Appeal ಆಂಧ್ರಪ್ರದೇಶದಲ್ಲಿ ಏನು ನಡೆಯುತ್ತಿದೆ, ಅದರ ನಂತರ ಅದು ಎಲ್ಲಾ IA ಆದ ಮೇಲೂ ಕೂಡ, ಇದು ಪ್ರೊಗ್ರೆಸ್‌ನಲ್ಲಂತೂ ಇದೆ. ಇನ್ನು ತಮಗೆ ಗೊತ್ತಿರುವ ಪ್ರಕಾರ ಕೇಂದ್ರ ಸರ್ಕಾರದ ಜವಾಬ್ದಾರಿಯೂ ಕೂಡ ಹೆಚ್ಚಿಗೆ ಇದೆ. ಇಲ್ಲಿ ನಿನ್ನೆ ದಿವಸ ಮಾನ್ಯ ವಾಟಾಳ್ ನಾಗರಾಜ್‌ರವರು ಕಳಸ ಬಂಡೂರಿ ಬಗ್ಗೆ ಪ್ರಸ್ತಾಪ ಮಾಡಿದಾಗ ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ನಾವು ಇದಕ್ಕೆ ಸಂಬಂಧಪಟ್ಟಂತೆ ದೆಹಲಿಗೂ ನಿನ್ನೆ ಹೋಗಿ ಬಂದಿದ್ದೇವೆ. ಈ ಬಗ್ಗೆ ಮೇಲ್ಮನೆಯಲ್ಲೂ ಕೂಡ ಮಾನ್ಯ ಹೆಚ್.ಕೆ. ಪಾಟೀಲ್‌ರವರು ಪ್ರಸ್ತಾಪ ಮಾಡಿದ್ದಾರೆ. ಒಟ್ಟಾರೆ ಕೇಂದ್ರ ಸರ್ಕಾರ ಇದರ ಬಗ್ಗೆ ಹೆಚ್ಚಿನ ಜವಾಬ್ದಾರಿಯನ್ನು ತೆಗೆದುಕೊಳ್ಳುವ ದಿಕ್ಕಿನಲ್ಲಿ ಎಲ್ಲಾ ಪಕ್ಷಗಳ ಅನುಭವಿ ರಾಜಕಾರಣಿಗಳ, ಸಲಹೆಗಳನ್ನು ತೆಗೆದುಕೊಂಡು ಇದರ ಜೊತೆಗೆ ಕೇಂದ್ರ ಸರ್ಕಾರದೊಂದಿಗೆ ಯಾವ ರೀತಿಯಲ್ಲಿ ಪತ್ರ ವ್ಯವಹಾರ ಮಾಡಬೇಕೆಂಬ ಬಗ್ಗೆ ಮತ್ತೆ ಖುದ್ದಾಗಿ ದೆಹಲಿಗೆ ಹೋಗಿ ಒತ್ತಡ ತರುವಂಥಾದ್ದು ಇರಬಹುದು. ಈ ರೀತಿಯಲ್ಲಿ ಕರ್ನಾಟಕ ರಾಜ್ಯಕ್ಕೆ ಏನು ಅನ್ಯಾಯಗಳು ಆಗುತ್ತಿವೆ. ಇದಕ್ಕೆ ಸಂಬಂಧಪಟ್ಟಂತೆ ಮೊನ್ನೆ ದಿವಸ ನಡೆದಂತ ಟ್ರಿಬ್ಯೂನಲ್‌ನಲ್ಲೂ ಕೂಡ, ಯಾವ ರೀತಿಯಲ್ಲಿ ಅವರು ಪರ್ಮನೆಂಟ್ ಸ್ಟ್ರಕ್ಚರ್‌ಗಳನ್ನು ಕಟ್ಟಿಕೊಳ್ಳುತ್ತಿದ್ದಾರೆ, ಅಲ್ಲಿ ನೀರು ಇಲ್ಲದಿದ್ದರೂ ಕೂಡ, ಇದು ಕನ್‌ಫರ್ಮ್ ಆದ ಮೇಲೆ ನಾವು ಅದನ್ನು ಬಳಸಿಕೊಳ್ಳುತ್ತೇವೆ. ಇಲ್ಲ ಪರವಾಗಿಲ್ಲ, ನಾವು ಪರ್ಮನೆಂಟ್ ಸ್ಟ್ರಕ್ಚರ್ ಕಟ್ಟಿಕೊಳ್ಳುತ್ತೇವೆಂದು ಹೊರಟಾಗ, ಅದಕ್ಕೆ ಏನು ಉತ್ತರ ಸಿಕ್ಕಿದೆಯೆಂಬುದನ್ನು ತಾವು ಗಮನಿಸಿದ್ದೀರಿ. ಈ ಬಗ್ಗೆ ಆಂಧ್ರ ಪ್ರದೇಶದವರು ಛೀಮಾರಿಯನ್ನು ಕೂಡ ಹಾಕಿಸಿಕೊಂಡಿದ್ದಾರೆ. ಇದರ ಬಗ್ಗೆ ನಮ್ಮ

ಪ್ರಾಮಾಣಿಕ ಪ್ರಯತ್ನ ಏನು ಇದೆ. ಈಗಾಗಲೇ ನಾವು ಇಂಟರೀಮ್ ಅಪೀಲ್ ಕೂಡ ಹಾಕಿದ್ದೇವೆ. ಅದು ಪ್ರೋಗ್ರೆಸ್‌ನಲ್ಲೂ ಇದೆ. ನಾವು ಒಂದು ಕಡೆ ಟ್ರಿಬ್ಯೂನಲ್ ಕಡೆಯಿಂದಲೂ ನ್ಯಾಯ ತೆಗೆದು–ಕೊಳ್ಳುವಂತಹ ಪ್ರಯತ್ನ ಮತ್ತೆ ಕೇಂದ್ರ ಸರ್ಕಾರದ ಮೇಲೂ ಕೂಡ ಒತ್ತಡವನ್ನು ತಂದು, ಈ ಎರಡೂ ರೀತಿಯಲ್ಲಿ ನಾವು ಯಾವ ರೀತಿಯಾಗಿ ನಮ್ಮ ರಾಜ್ಯದ ಹಿತವನ್ನು ಕಾಪಾಡಿಕೊಳ್ಳಬೇಕೋ ಆ ದಿಕ್ಕಿನಲ್ಲಿ ನಮ್ಮ ಸರ್ಕಾರ ಪ್ರಯತ್ನವನ್ನು ಮಾಡುತ್ತದೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನು ನಿಮ್ಮನ್ನು ಅದನ್ನೆ ಕೇಳಿದ್ದು. ಒಂದು ಕಡೆ ಕರ್ನಾಟಕ ರಾಜ್ಯಕ್ಕೆ ಅನ್ಯಾಯವಾಗಿದೆ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಬಿಜಾಪುರಕ್ಕೆ ಆಗಿರುವಂತಹ ಅನ್ಯಾಯವನ್ನು ತಾವು ಯಾವ ರೀತಿಯಲ್ಲಿ ಸರಿದೂಗಿಸುತ್ತೀರಿ? ಎಂದು ನಾನು ನಿಮ್ಮನ್ನು ಸ್ಪಷ್ಟವಾಗಿ ಕೇಳಿದ್ದೇನೆ. ಎರಡನೆಯದಾಗಿ ತಾವು ಆಗಲೇ 2007ರಲ್ಲಿ ಬಹುತೇಕ Tribunal award ಆಗಬಹುದೆಂದು ಹೇಳಿದ್ದೀರಿ. ಸ್ಕೀಮ್ 'ಬಿ' ನಲ್ಲಿ ಅಲೊಕೇಟ್ ಆಗುವಂತಹ ವಾಟರ್ ಏನು ಇದೆ. ಅದರಲ್ಲಿ ನಮಗೆ ಎಲ್ಲೆಲ್ಲಿ ಅನ್ಯಾಯವಾಗಿದೆ. ಆ ಜಿಲ್ಲೆಗೆ ಹೆಚ್ಚಿಗೆ ನೀರನ್ನು ಕೊಟ್ಟು, ವಿಶೇಷವಾಗಿ ಕಾಳಜಿಯನ್ನು ವಹಿಸಿ, ಮುತುವರ್ಜಿಯನ್ನು ತೆಗೆದುಕೊಂಡು ಆ ಜಿಲ್ಲೆಗೆ ತಾವು ಪ್ರಾಧಾನ್ಯತೆಯನ್ನು ಕೊಡುತ್ತೀರಾ ಎನ್ನುವಂತಹ ಆ ಮಾತನ್ನು ತಾವು ಹೇಳಲಿಲ್ಲ. ಆದುದರಿಂದ ತಾವು ದಯಮಾಡಿ, ನಾನು ನಿಮಗೆ ಹೇಳಿದ್ದೆ. ಯುಕೆಪಿಯಲ್ಲಿ 6,22,000 ಹೆಕ್ಟಾರ್ potentiality ಇದೆ. ಅದರಲ್ಲಿ ಐದು ಲಕ್ಷ ರಾಯಚೂರು, ಗುಲ್ಬರ್ಗಾ ಜಿಲ್ಲೆಗಳಿಗೆ ಹೋಗಿದೆ. ನಾನು ಈ ಮಾತನ್ನು ಆಗಲೇ ಹೇಳಿದ್ದೇನೆ. ಬಿಜಾಪುರ ಜಿಲ್ಲೆಯಲ್ಲಿ ಡ್ಯಾಮ್ ಆಗಿರುವಂಥಾದ್ದು, ಆದರೆ ನೀರು ಹೋಗುವಂತಹದ್ದು ಪರ ಜಿಲ್ಲೆಗೆ ಹೋಗಲಿ, ನನ್ನ ಅಭ್ಯಂತರ ಏನು ಇಲ್ಲ. Atleast proportionate ಆಗಿ ಹಿಂದಿನ ಯಾವ್ಯಾವ Irrigation Commissions ರಿಪೋರ್ಟ್ ಕೊಟ್ಟಿದ್ದಾರೆ. ಅಷ್ಟು ನೀರನ್ನಾದರೂ ಆ ಜಿಲ್ಲೆಗೆ ಒದಗಿಸಿ ಕೊಡುವಂತಹ ಪ್ರಯತ್ನವನ್ನು ಮಾಡುತ್ತೀರಾ? ಎರಡನೆಯದಾಗಿ ಈಗ Bagalkot Rehabilitation ಪ್ಯಾಕೇಜ್‌ಗೆ 600 ಕೋಟಿ ರೂಪಾಯಿಗಳನ್ನು ಕೊಡುತ್ತೀರಿ. ಆದೇ ಬಿಜಾಪುರ ಜಿಲ್ಲೆಯಲ್ಲಿ 37 ಹಳ್ಳಿಗಳು ಮುಳುಗಡೆಯಾಗಿದೆ. ಅದಕ್ಕೆ ಒಂದಕ್ಕೂ ನೀವು ಪ್ಯಾಕೇಜನ್ನು ಕೊಟ್ಟಿಲ್ಲ. ಕೊನೆ ಪಕ್ಷ ಮುಳುಗಡೆಯಾಗಿರುವ ಹಳ್ಳಿಗಳಿಗೆ Rehabilitation projects ರೋಡ್, ಡಾಂಬರ್ ರೋಡ್, ಯುಜಿಡಿ ಸ್ಟ್ರೀಟ್ ವಾಟರ್ ಸಪ್ಲೈ, ಇಂಥಾದ್ದನ್ನಾದರೂ ಕೊಡಬೇಕಲ್ಲಾ? ಈಗ ಬಾಗಲಕೋಟೆ ಡಿಸ್ಟ್ರಿಕ್ಟ್ ಹೆಡ್ ಕ್ವಾಟ್ರಸ್ ಆಗಿದೆಯೆಂದು ಅದಕ್ಕೆ 600 ಕೋಟಿ ರೂಪಾಯಿಗಳನ್ನು ತಾವು ಕೊಟ್ಟಿದ್ದೀರಿ. ಬಿಜಾಪುರ ಜಿಲ್ಲೆಯಲ್ಲಿ 37 ಹಳ್ಳಿಗಳು ಮುಳುಗಡೆಯಾಗಿದೆಯೆಂದರೆ, ಅದಕ್ಕೆ ಏನು ಕೊಡಬಾರದೆಂಬ ಧೋರಣೆಯನ್ನು ಹಿಂದಿನವರು ತಾಳಿದ್ದಾರೆ. ಇದರ ಬಗ್ಗೆ ನಾನು ಅಂಕಿ ಅಂಶಗಳನ್ನು ಡಿಟೈಲ್ ಆಗಿ ಕೊಡಿ ಎಂದು ಕೇಳಿದರೆ, ನಾನು ಮುಂದೆ ಡಿಸ್‌ಕಷನ್ ಮಾಡುವಾಗ ಕೊಡುತ್ತೇನೆ. ಈಗ ನಾನು

ಆ ಡೀಟೈಲ್‌ಗೆ ಹೋಗುವುದಿಲ್ಲ. ಈ ರೀತಿಯಲ್ಲಿ ಬಿಜಾಪುರ ಜಿಲ್ಲೆಗೆ ಏನು ಅನ್ಯಾಯವಾಗಿದೆ. ಅದನ್ನು ಸರಿದೂಗಿಸುವಂತಹ ಒಂದು ಮುಂದಾಲೋಚನೆ ನಿಮ್ಮಲ್ಲಿ ಇದೆಯಾ? ಎಂಬ ವಿಷಯವನ್ನು ತಮ್ಮಲ್ಲಿ ಕೇಳಬಯಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವಾನಂದ ಎಸ್. ಪಾಟೀಲ್‌ರವರು ಈ ಪ್ರಶ್ನೆಯನ್ನು ಕೇಳಿದಾಗಲೇ, ಅವರನ್ನು ನಾನು ಖಾಸಗಿಯಾಗಿಯೂ ಕರೆದು ಮಾತನಾಡಿದೆ. ನಿಮಗೆ ಏನು ಬೇಕೆಂಬ ಅಂಶದ ಬಗ್ಗೆ ನಿಮ್ಮ ಪ್ರಶ್ನೆಯಲ್ಲಿ ತುಂಬಾ ಸ್ಪಷ್ಟವಾಗಿ ಇಲ್ಲ. ಅದನ್ನು ತಾವು ತಿಳಿಸಿ ಎಂದು ಕೇಳಿದೆ. ಈಗ ಅವರು ಏನು ಪ್ರಸ್ತಾಪ ಮಾಡುತ್ತಿದ್ದಾರೆಂದರೆ ಹಿಂದಿನ ಸರ್ಕಾರದಿಂದ ನಮಗೆ ಸಾಕಷ್ಟು ಅನ್ಯಾಯವಾಗಿದೆ. ಈಗಲಾದರೂ ನಮಗೆ ನ್ಯಾಯಬೇಕೆಂಬ ಮಾತನ್ನು ಹೇಳುತ್ತಿದ್ದಾರೆ. ಅದಕ್ಕೆ ನಾನು ಹೇಳುವಂಥಾದ್ದು, ಇದರ ಬಗ್ಗೆ ಅನೇಕ ಕಮಿಟಿಗಳು ಅನೇಕ ವರದಿಗಳನ್ನು ಕೊಟ್ಟಿವೆ. ಅದನ್ನು ಲೆಕ್ಕದಲ್ಲಿ ಇಟ್ಟುಕೊಂಡು, ಮಾನ್ಯ ಶಿವಾನಂದ ಎಸ್. ಪಾಟೀಲ್‌ರವರನ್ನು ಕರೆದು, ಈ ಬಿ. ಸ್ಕೀಮ್ ಸಂದರ್ಭದಲ್ಲಿ ಈ ರೀತಿಯಾಗಿ ಯಾರ್ಯಾರಿಗೆ ಅನ್ಯಾಯವಾಗಿದೆಯೆಂದು ಅನಿಸುತ್ತಿದೆ. ಅಷ್ಟೂ ಜನರನ್ನು ಕೂರಿಸಿಕೊಂಡು, ಖಂಡಿತವಾಗಿ ಅನ್ಯಾಯವಾಗದ ರೀತಿಯಲ್ಲಿ ನೋಡಿಕೊಂಡು ನಾವು ನಿಮಗೆ ನ್ಯಾಯವನ್ನು ಕೊಡುತ್ತೇವೆ.

ಅಧ್ಯಕ್ಷರು : ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀ ವೈಜನಾಥ್ ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನು ಒಂದೇ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಈಗ 'ಬಿ' ಸ್ಕೀಮ್‌ನಲ್ಲಿ ಬರೀ ಸರ್‌ಪ್ಲಸ್ ವಾಟರ್ ಬಗ್ಗೆ ಮಾತ್ರ ಡಿಸಿಷನ್ ಆಗುತ್ತದೆಯೆ ಅಥವಾ ಅನ್ ಯುಟಿಲೈಸ್ ವಾಟರ್ ಏನು ಇದೆ. ಇದುವರೆಗೂ 729 ಟಿ.ಎಂ.ಸಿ. ನೀರು ಪೂರ್ತಿ ಯುಟಿಲೈಜ್ ಮಾಡಿಕೊಂಡಿಲ್ಲ. ಇವತ್ತು ಆಂಧ್ರ ಪ್ರದೇಶದವರ ಕ್ಲೈಮ್ ಏನಿದೆ unutilized water reallocate ಮಾಡಬೇಕೆಂಬ ವಾದ ಮಾಡುತ್ತಿದ್ದಾರೆ. ತಾವು ಯಾವ ರೀತಿ ಹಂಚುತ್ತಿದ್ದೀರಿ. ಇದರ ಬಗ್ಗೆ ಯಾವುದೇ ಒಂದು ಕ್ಲಿಯರ್ ಚಿತ್ರಣ ಕಾಣುತ್ತಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ನಾನು ತುಂಬಾ ಸ್ಪಷ್ಟವಾಗಿ ಹೇಳಿದ್ದೇನೆ. ನಾನು ತಮ್ಮನ್ನು ಕರೆಸಿ, ಅನ್ಯಾಯವಾಗದ ರೀತಿಯಲ್ಲಿ ನಿಮಗೂ ಕೂಡ ನ್ಯಾಯವನ್ನು ಕೊಡಿಸುತ್ತೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ: 518ಕ್ಕೆ ಸಂಬಂಧಪಟ್ಟಂತೆ ಮಾನ್ಯ ನಾಗರಾಜ ಶೆಟ್ಟಿಯವರು ಇರಲಿಲ್ಲ. ಈ ಬಗ್ಗೆ ನನಗೆ ಉತ್ತರ ಕೊಡಬೇಕು.

ಶ್ರೀ ಜಗದೀಶ್ ಶೆಟ್ಟರ್ : ನಾನು ಮಾನ್ಯ ನಾಗರಾಜ ಶೆಟ್ಟಿಯವರಿಂದ ಮಾಹಿತಿಯನ್ನು ತೆಗೆದುಕೊಂಡಿದ್ದೇವೆ. ಇದಕ್ಕೆ ಉತ್ತರವನ್ನು ಕೊಡಬೇಕೆಂದು ಹೇಳಿದರೆ ಕೊಡುತ್ತೇನೆ.